# ಗಂಗಾಮತಸ್ಥರ ಕುಲಕಸುಬುಗಳು

**ಪವಿತ್ರ ಹೆಚ್.ಸಿ.***

**DOI: https://doi.org/10.5281/zenodo.20614328**

**ABSTRACT**

ಗಂಗಾಮತಸ್ಥ ಸಮುದಾಯದ ಪ್ರಮುಖ ಕುಲಕಸುಬುಗಳಾದ ಮೀನುಗಾರಿಕೆ, ಬಲೆ ನೇಯುವುದು, ಸುಣ್ಣ ಸುಡುವುದು ಹಾಗೂ ವೀಳ್ಯದೆಲೆ ಬೆಳೆಯುವ ಸಾಂಪ್ರದಾಯಿಕ ವಿಧಾನಗಳನ್ನು ಇಲ್ಲಿ ವಿವರಿಸಲಾಗಿದೆ. ಮೀನುಗಾರರು ಎದುರಿಸುತ್ತಿರುವ ಆರ್ಥಿಕ ಹಾಗೂ ಆಡಳಿತಾತ್ಮಕ ಸವಾಲುಗಳು, ಕೆರೆಗಳ ಗುತ್ತಿಗೆ ಸಮಸ್ಯೆ ಮತ್ತು ಸರ್ಕಾರಿ ಸೌಲಭ್ಯಗಳ ಕೊರತೆಯನ್ನು ಪ್ರಸ್ತಾಪಿಸಲಾಗಿದೆ. ಮೀನುಗಾರಿಕೆ ಮತ್ತು ಶಿಕಾರಿಗೆ ಬಳಸುವ ಸುತ್ತು ಬಲೆ, ಬೀಸು ಬಲೆ, ಮಾರಿ ಬಲೆ ಮುಂತಾದ ವಿವಿಧ ಬಲೆಗಳ ಪರಿಚಯವನ್ನು ನೀಡಲಾಗಿದೆ. ಜೊತೆಗೆ, ವೀಳ್ಯದೆಲೆ ತೋಟವನ್ನು ಸಾಕ್ಷಾತ್ ಲಕ್ಷ್ಮೀದೇವಿ ಎಂದು ಪವಿತ್ರವಾಗಿ ಭಾವಿಸಿ ಮಾಡುವ ಕೃಷಿ ವಿಧಾನ, ಎಲೆಗಳ ಎಣಿಕೆ ಮತ್ತು ಮಾರಾಟದ ಕ್ರಮವನ್ನು ವಿವರಿಸಲಾಗಿದೆ. ಆಧುನಿಕ ಕಾಲದಲ್ಲಿ ಶಿಕ್ಷಣದ ಪ್ರಭಾವದಿಂದಾಗಿ ಈ ಸಮುದಾಯದ ಯುವಜನತೆ ತಮ್ಮ ಸಾಂಪ್ರದಾಯಿಕ ಕಸುಬುಗಳನ್ನು ಬಿಟ್ಟು ಹೊಸ ವೃತ್ತಿಗಳತ್ತ ಮುಖ ಮಾಡುತ್ತಿರುವ ಸಾಮಾಜಿಕ ಬದಲಾವಣೆಯ ಚಿತ್ರಣವನ್ನು ಸಹ ಇಲ್ಲಿ ಕಟ್ಟಿಕೊಡಲಾಗಿದೆ.

**KEYWORDS:** ಗಂಗಾಮತಸ್ಥರು, ಕುಲಕಸುಬು, ಮೀನುಗಾರಿಕೆ, ಬಲೆಗಳ ವಿಧಗಳು, ವೀಳ್ಯದೆಲೆ ಕೃಷಿ.

ಗಂಗಾಮತಸ್ಥರೆಂದರೆ ಗಂಗೆಯ ಕುಲದವರು, ಮೂಲವೇ ಗಂಗೆ ಆಗಿರುವುದರಿಂದ ಮೀನುಗಾರಿಕೆ ಇವರ ಕುಲಕಸುಬಾಗಿದ್ದು, ಇವುಗಳ ಜೊತೆಗೆ ವೀಳ್ಯದೆಲೆ ತೋಟ, ಸುಣ್ಣ ಸುಡುವುದು ಇವು ಹಿಂದಿನಿಂದಲೂ ಬಂದಿರುವಂತಹ ಕಸುಬುಗಳಾಗಿವೆ. ಸರ್ಕಾರವು ಮೀನುಗಾರರಿಗೆ ಕೆಲವೊಂದಿಷ್ಟು ಸೌಲಭ್ಯಗಳನ್ನು ನೀಡುತ್ತಿದ್ದರೂ ಆ ಸೌಲಭ್ಯಗಳು ಎಲ್ಲಾ ಮೀನುಗಾರರನ್ನು ತಲುಪುತ್ತಿಲ್ಲ. ಊರುಗಳಲ್ಲಿರುವ ಕೆರೆಗಳಿಗೆ ಸ್ಥಳೀಯ ಸಂಸ್ಥೆಗಳು ಗುತ್ತಿಗೆ ಆಧಾರದ ಮೇಲೆ

* **ಪವಿತ್ರ ಹೆಚ್.ಸಿ.,** ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಕೊಡುತ್ತಿರುವ ಕೆರೆಗಳಿಗೆ ಅತಿಯಾದ ಬೆಲೆಯನ್ನು ನಿಗದಿ ಮಾಡುವುದು, ಆ ನಿಗದಿ ಪಡಿಸಿದ ಹಣವನ್ನು ಪ್ರಾರಂಭದ ದಿನದಲ್ಲೇ ಕಟ್ಟಬೇಕೆಂದು ನಿಯಮವಿದ್ದು, ರಾಜಕೀಯ ವ್ಯಕ್ತಿಗಳ ಪ್ರಭಾವ ಬೀರಿರುವುದು, ಕೆಲವು ಸಲ ಕೆರೆಗಳಲ್ಲಿರುವ ಮೀನುಗಳು ರೋಗಕ್ಕೆ ತುತ್ತಾಗಿ ಸಾಯುವುದು, ಕೆಲವೊಮ್ಮೆ ಉತ್ತಮ ತಳಿಗಳನ್ನು ಕೊಡದೆ ಇರುವುದು, ಮೀನುಗಾರಿಕೆ ಇಲಾಖೆಯವರು ನಿರ್ಲಕ್ಷಿಸುವುದು ಇತ್ಯಾದಿ ಹಲವಾರು ರೀತಿಯಾದಂತಹ ತೊಂದರೆಗಳನ್ನು ಇವರು ಇಂದಿಗೂ ಎದುರಿಸುತ್ತಿದ್ದಾರೆ. ಮೀನು ಹಿಡಿಯುವ ಕಸುಬು ಮುಖ್ಯವಾಗಿರುತ್ತದೆ. ಇದರಿಂದಾಗಿ ಸರ್ಕಾರ ಗಂಗಾ ಮತಸ್ಥರಿಗೆ ಉಚಿತ ಕೆರೆಗಳನ್ನು, ಉತ್ತಮ ತಳಿಯ ಮೀನುಗಳನ್ನು ನೀಡಿ ಸಾಲ ಸೌಲಭ್ಯಗಳನ್ನು ನೀಡುವ ಮೂಲಕ ಸಹಕಾರಿಯಾಗಬೇಕಾಗುತ್ತದೆ. ಅಲ್ಲದೇ ಸಂಘ-ಸಂಸ್ಥೆಗಳು ಸಹಕಾರಿಯಾಗಬೇಕಾಗುತ್ತದೆ. ಅಷ್ಟೇ ಅಲ್ಲದೇ ಅವರಿಗೆ ಬೇಕಾದಂತಹ ಮೀನುಗಾರಿಕೆಯ ಉಪಕರಣಗಳನ್ನು ಒದಗಿಸಿಕೊಡಬೇಕು.

ಬಲೆ ನೇಯುವುದನ್ನು ಕೆಲವರು ವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೆ. ಮೀನುಗಾರಿಕೆ ಬೇಟೆಗೆ ಬಲೆ ನೇಯ್ದು ಬೇರೆ ಊರುಗಳಲ್ಲಿ ಮಾರಿ ಬರುತ್ತಾರೆ. ಮೀನುಗಾರಿಕೆಯಲ್ಲಿ ವಿವಿಧ ರೀತಿಯಾದಂತಹ ಮೀನುಗಳು ಇರುವುದರಿಂದ ವಿಭಿನ್ನವಾದಂತಹ ಬಲೆಗಳನ್ನು ನೇಯುತ್ತಾರೆ. ಸಣ್ಣ-ದೊಡ್ಡ ಮೀನುಗಳಿಂದ ಹಿಡಿದು ಸೀಗಡಿ ಮೀನಿನವರೆಗೆ ವಿವಿಧ ರೀತಿಯ ಮೀನುಗಳನ್ನು ಹಿಡಿಯುವುದಕ್ಕೆ ವಿವಿಧ ರೀತಿಯಾದಂತಹ ಬಲೆಗಳನ್ನು ನೇಯುತ್ತಾರೆ. ಮೀನುಗಳನ್ನು ಹಿಡಿಯುವುದರ ಜೊತೆಗೆ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಲು ಅಥವಾ ಶಿಕಾರಿ ಮಾಡಲು ಬೇಕಾಗುವ ಬಲೆಗಳನ್ನು ಸಹ ನೇಯುತ್ತಾರೆ. ಮೊಲ, ನರಿ, ಜಿಂಕೆ, ಕಾಡು ಇಲಿ, ತೋಳ ಇಂತಹ ಪ್ರಾಣಿಗಳನ್ನು ಬೇಟೆಯಾಡಲು ಬೇಕಾಗುವಂತಹ ಬಲೆಯನ್ನು ನೇಯುತ್ತಾರೆ. ಸುತ್ತು ಬಲೆ, ಬೀಸು ಬಲೆ, ಸೀಗಡಿ ಬಲೆ, ಮರಗಿ ಬಲೆ, ಬೀಡಿನ ಬಲೆ, ಇಡೆ ಬಲೆ, ದೋಣಿ ಬಲೆ, ಮಾರಿ ಬಲೆ, ಸಾಮಾನ್ಯ ಬಲೆ ಹೀಗೆ ಹಲವಾರು ರೀತಿಯಾದಂತಹ ಬಲೆಗಳನ್ನು ನೇಯುತ್ತಾರೆ.

**ಸುತ್ತು ಬಲೆ:** ಕೆರೆಯಲ್ಲಿ ನೀರು ಕಡಿಮೆಯಾದಾಗ ಕೆರೆಯ ಒಳಗೆ ಇಳಿದು ಬೇಟೆಯಾಡುವುದು. ನೀರು ಕಡಿಮೆ ಇರುವುದರಿಂದ ಮೀನುಗಳು ಯಾವ ಕಡೆ ಇವೆ ಎಂಬುದು ಕಾಣುತ್ತಿರುತ್ತದೆ. ಇದರಿಂದಾಗಿ ಬೇಟೆಗಾರರು ನಿರಾಯಾಸವಾಗಿ ಮೀನುಗಳನ್ನು ಹಿಡಿಯುತ್ತಾರೆ.

**ಬೀಸು ಬಲೆ:** ತುಂಬಿದ ಕೆರೆಯಲ್ಲಿ ಅಥವಾ ಹರಿಯುವ ನದಿಯಲ್ಲಿ ಮೀನು ಹಿಡಿಯಲು ಹಾಕುವ ಬಲೆ. ತುಂಬಿದ ಕೆರೆಯ ಒಳಗಡೆಗೆ ತೆಪ್ಪದಲ್ಲಿ ಹೋಗಿ ಮೀನು ಇರುವ ಕಡೆಗೆ ಬಲೆಯನ್ನು ಬೀಸುತ್ತಾರೆ. ಮೂರು-ನಾಲ್ಕು ನಿಮಿಷಗಳನ್ನು ಬಿಟ್ಟು ಬಲೆಯನ್ನು ಮೇಲಕ್ಕೆ ಎತ್ತುತ್ತಾರೆ. ಹರಿಯುವ ನದಿಯಲ್ಲಿಯೂ ತೆಪ್ಪದ ಮೂಲಕ ನದಿಯ ನೀರು ನಿಂತಿರುವ ಕಡೆಗೆ ಹೋಗಿ ಬಲೆಯನ್ನು ಬೀಸಿ ಮೀನುಗಳನ್ನು ಹಿಡಿಯುತ್ತಾರೆ. ಬೆಳಗ್ಗೆ ಅಥವಾ ಸಂಜೆ ವೇಳೆಯಲ್ಲಿ ಈ ಬಲೆಯನ್ನು ಬಳಸಿಕೊಂಡು

ಮೀನಿನ ಶಿಕಾರಿಯನ್ನು ಆಡುತ್ತಾರೆ.

**ಮಾರಿ ಬಲೆ:** ಬಲೆಗಳಲ್ಲಿ ಅತ್ಯಂತ ದೊಡ್ಡದು ಮಾರಿ ಬಲೆ ಅಥವಾ ರಂಪಣಿ. ಹದಿನಾರನೆಯ ಶತಮಾನದ ಕಾಲಘಟ್ಟದಲ್ಲಿ ಮೀನುಗಾರರಿಗೆ ಸಹಾಯಕವಾಗಿ ಬಂದದ್ದು ಮಾರಿಬಲೆಯಾಗಿದೆ. ನೂರಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವ ಮೂಲಕ ಮಾರಿಬಲೆಯ ಸಂಶೋಧನೆ ಮೀನುಗಾರಿಕೆಯ ಜಗತ್ತಿನಲ್ಲಿ ಒಂದು ನೂತನ ಬೆಳಕನ್ನು ಸೃಷ್ಟಿಸಿತು ಎನ್ನಬಹುದು. ಮಾರಿ ಬಲೆಯ ಸಂಪ್ರದಾಯವು ಗೋವಾದಲ್ಲಿ ಹುಟ್ಟಿ ಆನಂತರ ಕರ್ನಾಟಕಕ್ಕೆ ಬಂತು ಎಂಬುದು ಹಿರಿಯರ ಅನುಭವದ ಮಾತಾಗಿದ್ದು, ಈ ಬಲೆಗೆ ದೊಡ್ಡ ಮೀನುಗಳಿಂದ ಹಿಡಿದು ಸಣ್ಣ ಮೀನುಗಳವರೆಗೂ ಬೀಳುತ್ತವೆ.

**ಬೀಡಿನ ಬಲೆ:** ತುಂಬಿದ ಕೆರೆಗಳಲ್ಲಿ ಸಂಜೆ 4:00 ಗಂಟೆಯ ನಂತರ ಮೀನುಗಳನ್ನು ಹಿಡಿಯಲು ಈ ಬಲೆಯನ್ನು ಉಪಯೋಗಿಸುತ್ತಾರೆ. ಎಲ್ಲ ಜಾತಿಯ ಮೀನುಗಳು ಸಹ ಈ ಬಲೆಗೆ ಬೀಳುತ್ತವೆ. ಕತ್ತಲಾಗುವವರೆಗೂ ಬೀಡಿನ ಬಲೆಯನ್ನು ಉಪಯೋಗಿಸಿ ಮೀನುಗಳನ್ನು ಹಿಡಿಯುತ್ತಾರೆ. ತೆಪ್ಪದ ಮೂಲಕ ಇಬ್ಬರು ಅಥವಾ ಮೂರು ಜನರು ಕೆರೆಯ ಒಳಗಡೆ ಹೋಗಿ ಬಲೆಯನ್ನು ಬೀಸಿ ಮೀನುಗಳನ್ನು ಹಿಡಿದು ಸಾಧ್ಯವಿದ್ದರೆ ಸಂಜೆಯೇ ಮಾರುತ್ತಾರೆ. ಕೆಲವೊಮ್ಮೆ ಗ್ರಾಹಕರು ಅಲ್ಲಿಗೆ ಬಂದು ಮೀನುಗಳನ್ನು ಕೊಂಡೊಯ್ಯುತ್ತಾರೆ, ಕೆಲವರು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಅಂಗಡಿಗಳಲ್ಲಿ ಮಾರಾಟ ಮಾಡುತ್ತಾರೆ.

**ಸೀಗಡಿ ಬಲೆ:** ಹೆಸರಲ್ಲೇ ಇರುವಂತೆ ಸೀಗಡಿ ಮೀನುಗಳನ್ನು ಹಿಡಿಯಲು ಬಳಸುವಂತಹ ಬಲೆಯಾಗಿದ್ದು, ಇವು ಸಣ್ಣ ಆಕಾರವನ್ನು ಹೊಂದಿದ್ದು ಹುಳುವಿನ ರೂಪದಲ್ಲಿ ಇರುತ್ತವೆ. ಇವುಗಳನ್ನು ಬಾಣಂತಿಯರಿಗೆ ಹೆಚ್ಚಾಗಿ ನೀಡುತ್ತಾರೆ. ಅವರೆಕಾಳನ್ನು, ಸೀಗಡಿಯನ್ನು ಹುರಿದು, ತೊಳೆದು ನೀರನ್ನು ಹಾಕಿ ಸ್ವಲ್ಪ ಉಪ್ಪು ಸೇರಿಸಿ ಉಪ್ಪುಸಾರಿನ ರೂಪದಲ್ಲಿ ಮಾಡಿ, ಅದಕ್ಕೆ ಕಲ್ಲಿನಿಂದ ಅರೆದಂತಹ ಖಾರ ಅಂದರೆ ಕೆಂಪು ಮೆಣಸಿನಕಾಯಿ, ಮೆಣಸು, ಜೀರಿಗೆ, ಬೆಳ್ಳುಳ್ಳಿ, ಸ್ವಲ್ಪ ಹುಣಸೆಹಣ್ಣು, ಉಪ್ಪು ಎಲ್ಲವನ್ನು ಹಾಕಿ ಹಸೆಕಲ್ಲಿನ ಮೇಲೆ ಅರೆದು, ಅದನ್ನು ಉಪ್ಪುಸಾರಿಗೆ ಕಲಸಿಕೊಂಡು ಊಟ ಮಾಡಲು ನೀಡುತ್ತಾರೆ.

**ವೀಳ್ಯದೆಲೆ ಬೆಳೆಯುವುದು:** ಗಂಗಾಮತಸ್ಥರು, ಅದರಲ್ಲೂ ರಾಮನಗರ ಜಿಲ್ಲೆಯಲ್ಲಿನ ಗಂಗಾಮತಸ್ಥರು ಅತಿ ಹೆಚ್ಚಾಗಿ ವೀಳ್ಯದೆಲೆ ತೋಟವನ್ನು ಮಾಡಿಕೊಂಡು ಎಲೆಯನ್ನು ಬೆಳೆಯುತ್ತಾರೆ. ವೀಳ್ಯದೆಲೆಯನ್ನು ಇವರು ಸಾಕ್ಷಾತ್ ಲಕ್ಷ್ಮೀದೇವಿ ಎಂದು ನಂಬಿದ್ದು, ವೀಳ್ಯದೆಲೆ ತೋಟಕ್ಕೆ ಯಾರೊಬ್ಬರೂ ಸಹ ಚಪ್ಪಲಿ ಅಥವಾ ಪಾದರಕ್ಷೆಗಳನ್ನು ಹಾಕಿಕೊಂಡು ಹೋಗುವಂತಿಲ್ಲ. ತೋಟದಲ್ಲಿ ಯಾರೊಬ್ಬರೂ ಉಗಿಯುವಂತಿಲ್ಲ, ತೋಟವನ್ನು ಒದೆಯುವಂತಿಲ್ಲ. ವೀಳ್ಯದೆಲೆ ತೋಟವನ್ನು ಗಂಗಾಮತಸ್ಥರು ಅಕ್ಷರಶಃ ದೇವಾಲಯವೆಂದು ಭಾವಿಸಿರುತ್ತಾರೆ. ಲಕ್ಷ್ಮೀದೇವಿಗೆ ಅಂದರೆ ವೀಳ್ಯದೆಲೆ ತೋಟಕ್ಕೆ ಕಾಲಕಾಲಕ್ಕೆ ನೀರನ್ನು ಬಿಡುವುದು, ಮಂಟೆ

ಹೊಡೆಯುವುದು, ಸರಿ ಕಟ್ಟುವುದು, ಮಂಟೆಗೆ ಕಲ್ಲು ಇಡುವುದು, ಅಂಬನ್ನು ಇಳಿಸುವುದು, ವೀಳ್ಯದೆಲೆಯನ್ನು ಕೊಯ್ಯುವುದು, ಈ ರೀತಿಯಾದಂತಹ ಇನ್ನೂ ಹಲವಾರು ಬಗೆಯ ವೀಳ್ಯದೆಲೆ ಕೃಷಿಯನ್ನು ಕಾಣಬಹುದಾಗಿದೆ. ಎಲೆ ಹಿಡಿಯುವಂತಹ ಸಂದರ್ಭದಲ್ಲಿ ಒಂದು ಕೌಳಿಗೆ ಅಂದರೆ ಅದರಲ್ಲಿ 50 ವೀಳ್ಯದೆಲೆಗಳಿರುತ್ತವೆ; ಇಂತಹ ಎರಡು ಕೌಳಿಗೆ ಸೇರಿ ನೂರು ವೀಳ್ಯದೆಲೆಗಳಿರುತ್ತವೆ. ಇದನ್ನು ಒಂದು ಕಟ್ಟು ಎಂದು ಎಣಿಕೆ ಮಾಡಲಾಗುತ್ತದೆ. ಇಂತಹ ನೂರು ಕಟ್ಟು ಇದ್ದರೆ 10,000 ವೀಳ್ಯದೆಲೆಗಳು ಇರುತ್ತವೆ. ಎರಡು ಕೌಳಿಗೆ = ಒಂದು ಕಟ್ಟು; ಇಂತಹ ನೂರು ಕಟ್ಟುಗಳಿದ್ದರೆ ಅದು ಒಂದು ಪಿಂಡಿ ಎಂದು ಹೇಳಲಾಗುತ್ತದೆ. ವೀಳ್ಯದೆಲೆಯನ್ನು ಎಣಿಕೆ ಮಾಡಿ ಜೋಡಿಸುವಂತಹ ಸಂದರ್ಭದಲ್ಲಿ ಸಣ್ಣ ದಪ್ಪ ಎಲೆಗಳನ್ನು ಸೇರಿಸಿ ಎಲೆಯನ್ನು ಹಿಡಿಯುತ್ತಾರೆ. ಅದೇ ರೀತಿಯಾಗಿ ಗುಳ್ಳೆ ಬಂದಿರುವ ಎಲೆ, ಹಣ್ಣೆಲೆ ಅಂದರೆ [ಆ ಎಲೆಯ ತೊಟ್ಟು ಸ್ವಲ್ಪ ಕೆಂಬಣ್ಣಕ್ಕೆ ತಿರುಗಿದ್ದು, ಎಲೆ ಬಲಿತಿರುವುದಿಲ್ಲ] ಮತ್ತೆ ಹರಿದಿರುವಂತಹ ಎಲೆಗಳನ್ನು ಹಾಕಿ ಎಲೆಯನ್ನು ಹಿಡಿಯುವಂತಿಲ್ಲ. ಎಲೆಯನ್ನು ಕೊಯ್ಯುವ ಸಂದರ್ಭದಲ್ಲಿ ಎಲೆಯನ್ನು ಕೊಯ್ಯಲು 'ಉಗುರು' ಎಂಬ ಕಬ್ಬಿಣದ ಸಲಾಕೆ ಇದ್ದು, ಅದರಿಂದಲೇ ಎಲೆಯನ್ನು ಕೊಯ್ಯಬೇಕು. ಬರಿ ಉಗುರಿನಿಂದ ವೀಳ್ಯದೆಲೆಯನ್ನು ಕೊಯ್ಯಬಾರದು. ಎಲೆಪಿಂಡಿಯನ್ನು ಕಟ್ಟಲು ತೆಂಗಿನ ಗರಿಯನ್ನು ತಂದು ಅದನ್ನು ಹೆಣೆದು ಅದರಿಂದ ಪಿಂಡಿಯನ್ನು ಕಟ್ಟಿಕೊಳ್ಳುತ್ತಾರೆ. ಏಕೆಂದರೆ ಅದು ಬಿಸಿಲಿಗಾಗಲಿ, ಮಳೆಗಾಗಲಿ ವೀಳ್ಯದೆಲೆ ಕೆಡಬಾರದು ಎಂದು ಹಾಗೆ ಕಟ್ಟಿಕೊಂಡು ಮಾರಾಟ ಮಾಡಲು ಹೋಗುತ್ತಾರೆ.

**ಶಿಕ್ಷಣ:** ಶಿಕ್ಷಣವು ಎಂತಹ ವೃತ್ತಿಯನ್ನಾದರೂ ಬದಲಿಸುವಂತಹ ಶಕ್ತಿಯನ್ನು ಹೊಂದಿರುತ್ತದೆ. ಅದೇ ರೀತಿಯಾಗಿ ಇತ್ತೀಚಿನ ವರ್ಷಗಳಲ್ಲಿ ಗಂಗಾಮತಸ್ಥರ ಮಕ್ಕಳು ಶಿಕ್ಷಣವನ್ನು ಪಡೆದು ತಮ್ಮ ತಮ್ಮ ಇಷ್ಟದ ವೃತ್ತಿಗಳನ್ನು ಮಾಡುತ್ತಿದ್ದಾರೆ. "ಅಪ್ಪ ಹಾಕಿದ ಆಲದ ಮರ"ದಂತೆ ಕುಲಕಸುಬನ್ನೇ ಇತ್ತೀಚಿನ ದಿನಗಳಲ್ಲಿ ಯಾರು ನಂಬಿಕೊಂಡು ಬದುಕುತ್ತಿಲ್ಲ. ಎಲ್ಲರೂ ಸ್ವತಂತ್ರವಾದ ಆಯ್ಕೆಯನ್ನು ಹೊಂದಿರುತ್ತಾರೆ ಎಂದು ಹೇಳಬಹುದು. ಮೀನುಗಾರಿಕೆ, ಸುಣ್ಣ ಸುಡುವುದು ತೊರೆದು ತಮ್ಮ ಇಷ್ಟದ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ.

## ಪರಾಮರ್ಶನ ಗ್ರಂಥಗಳು:


1. ಹಲಸಂಗಿ ಗೆಳೆಯರು (ಸಂ.), (1931), ಗರತಿಯ ಹಾಡು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ರಂಗನಗೌಡ ನಿಲ್ಲೋಗಲ್ ಜಿ., ಮೂಢನಂಬಿಕೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
3. ಮಲ್ಲಿಕಾರ್ಜುನ ಸಮ್ಮೇತ್ರಿ, ಜಾನಪದ ಆಟಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
4. ಮಾಳಿ ವಿ. ಎಸ್., ಜನಪದ ಸಾಹಿತ್ಯ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.